# ಬೆಕ್ಕಿನ ಸಂಸಾರ ಕಲಿಸುವ ಪಾಠ

■ ಸ್ವಯಂಪ್ರಭಾ

'ಸ್ನಾಪ್ ಚಾಟ್'ನಲ್ಲಿ ಸುಕನ್ಯಾ ಬೆಕ್ಕಿನ ಫೋಟೊಗಳನ್ನು ಆಗಾಗ ಹಾಕುತ್ತಿರುತ್ತಾಳೆ. ಸುಕನ್ಯಾ ಮತ್ತು ನಮಿತಾ ಇಬ್ಬರೂ ಬೆಕ್ಕಿನ ಸ್ನೇಹಿತರು. ಮೊಬೈಲ್‌ನಲ್ಲಿ, ಪುಸ್ತಕದಲ್ಲಿ, ಬ್ಯಾಗ್‌ನಲ್ಲಿ, ಎಲ್ಲಿ ನೋಡಿದರೂ ಪುಟ್ಟ ಬೆಕ್ಕುಗಳ ಕಿತಾಪತಿ ಫೋಟೊಗಳನ್ನು ಅಂಟಿಸಿಕೊಂಡಿರುತ್ತಿದ್ದರು. ಇತ್ತೀಚೆಗೆ ಸುಕನ್ಯಾ ಮನೆಯ 'ಬೆಳ್ಳಿ' ಮರಿ ಹಾಕಿತು. ಬಿಳಿ ಬಣ್ಣದ ಮತ್ತು ಕಂದು ಬಣ್ಣದ ಎರಡು ಬೆಕ್ಕು ಮರಿಗಳಿಗೆ ತಿಂಗಳು ತುಂಬಿದ್ದೇ ಅವುಗಳ ಸುಂದರವಾದ ಫೋಟೊಗಳನ್ನು ಒಂದರ ಮೇಲೆ ಒಂದರಂತೆ 'ಸ್ನಾಪ್ ಚಾಟ್'ನಲ್ಲಿ ಹಾಕಿದ್ದೇ ಹಾಕಿದ್ದು. ನಮಿತಾ ಈ ಬೆಕ್ಕುಮರಿಗಳನ್ನು ನೋಡಲು ಗೆಳತಿಯ ಮನೆಗೆ ಹೋದಳು. ಅಲ್ಲಿ ಹೋದಮೇಲೆ ನಿಜ ವಿಷಯ ಗೊತ್ತಾಯಿತು. ಬೆಕ್ಕುಗಳ ಫೋಟೊ ತೆಗೆಯುವ, ಮುದ್ದು ಮಾಡುವ ಸುಕನ್ಯಾ, ಬೆಕ್ಕುಗಳ ಆರೈಕೆಯ ಗೊಡವೆಗೆ ಹೋದವಳಲ್ಲ. ಅವಳ ತಮ್ಮ ಸುಶಾಂತ್ ಬೆಕ್ಕುಗಳ ಅಕ್ಕರೆ ಮಾಡಿ ಕಾಳಜಿಯಿಂದ ನೋಡಿಕೊಳ್ಳುತ್ತಿದ್ದ.

ಸುಶಾಂತ್‌ಗೆ ಪ್ರಾಣಿಗಳೆಂದರೆ ಇಷ್ಟ. ಬೆಕ್ಕು ಪ್ರತೀ ಬಾರಿ ಗರ್ಭಿಣಿಯಾದಾಗ, ಅವನು ಅಂಗಡಿಗೆ ಹೋಗಿ ಒಂದು ಕಾರ್ಡ್ ಬೋರ್ಡ್ ಬಾಕ್ಸ್ ತರುತ್ತಾನೆ. ಬೆಕ್ಕಿಗೆ ಕೈಕಾಲು ಚಾಚಲು ಬೇಕಾದಷ್ಟು ಜಾಗವಿರುವ ಡಬ್ಬವನ್ನೇ ಹುಡುಕಿ, ಮನೆಗೆ ತಂದು, ಅದರೊಳಗೆ ಸಾಕಷ್ಟು ಗಾಳಿಯಾಡುವಂತೆ ತೂತುಗಳನ್ನು ಕೊರೆಯುತ್ತಾನೆ. ಮನೆ ಬೆಕ್ಕು ಬೆಳ್ಳಿಗೂ ಅವನೆಂದರೆ ಬಹಳ ವಿಶ್ವಾಸ. ಮೊನ್ನೆಯಷ್ಟೇ ಹೆರಿಗೆ ನೋವು ಬಂದಿದ್ದಾಗ, ಬೆಳ್ಳಿ ಅವನ ಕಾಲುಗಳ ಸುತ್ತವೇ ಬೊಬ್ಬಿರಿಯುತ್ತ ಸುತ್ತುತ್ತಿತ್ತು ಎಂದು ಅವನ ಅಮ್ಮ ಹೇಳುತ್ತಿದ್ದರು. ಹೆರಿಗೆ ವೇಳೆಗೆ ಅವನು, ಬೆಕ್ಕಿನ ಹಣೆ ನೇವರಿಸುತ್ತಾ, ಬಟ್ಟೆಗಳನ್ನು ಹೊಂದಿಸಿಕೊಡುತ್ತಾ ಅಕ್ಷರಶಃ ದಾದಿಯಂತೆ ಅದರ ಆರೈಕೆ ಮಾಡುತ್ತಿದ್ದ. ಹೆರಿಗೆಯಾದ ಒಂದೆರಡು ತಾಸುಗಳ ಬಳಿಕ ಜೋರು ಹಸಿವಿನಿಂದ ಬೊಬ್ಬೆ ಹೊಡೆಯುವ ಬೆಳ್ಳಿಗಾಗಿ ಆಮ್ಲೆಟ್ ಮಾಡಿದ್ದ.

ಬೆಳ್ಳಿ ಹಲವು ಬಾರಿ ಮರಿ ಹಾಕಿದ್ದಾಳೆ. ಆಗೆಲ್ಲ ಸುಶಾಂತನದೇ ಬಾಣಂತನ ಜವಾಬ್ದಾರಿ. ಬೆಳ್ಳಿ ಬಸುರಾದ ಕೂಡಲೇ ಅದಕ್ಕೆ ಏನೆಲ್ಲ ಬೇಕಾಗುವುದು ಎಂದು ಯೋಚಿಸಿ ಸಿದ್ಧವಾಗಿರಿಸುತ್ತಿದ್ದ. ಹೆರಿಗೆ ನೋವು ಬಂದಾಗ ಬೆಕ್ಕಿನ ಬೊಬ್ಬೆಯನ್ನು ತಡೆಯಲು ಏನೆಲ್ಲ ಮಾಡಬೇಕು ಎಂದು ಮೊದಲೇ ಅರಿತಿದ್ದ. ಅವನ ಈ ಕಾಳಜಿ ನೋಡಿ, 'ಗಂಡಸರಿಗೇನು ಗೊತ್ತು ಗೌರೀದುಃಖ' ಎಂಬ ಮಾತನ್ನು ಅವರಮ್ಮ ಬದಲಿಸಿಕೊಂಡಿದ್ದರು. ಕಾಳಜಿ ಮಾಡುವುದು, ಪೋಷಣೆಯ ಸ್ವಭಾವ ಹೆಣ್ಣುಮಕ್ಕಳಿಗೆ ಸೀಮಿತ ಎಂಬ ತಪ್ಪುಕಲ್ಪನೆ ಹೆಚ್ಚಿನವರಲ್ಲಿ ಇರುತ್ತದೆಷ್ಟೇ.

ಮಕ್ಕಳ ಆಸಕ್ತಿಗಳು ವೈವಿಧ್ಯಮಯವಾಗಿರುತ್ತವೆ. ಪ್ರೀತಿಯ ಮೊಗ್ಗೊಂದು ಅವರ ನಿಷ್ಕಲ್ಮಷವಾದ ಅಂತರಂಗದಲ್ಲಿ ಸುಲಭವಾಗಿ ಅರಳುವುದು. ಅವುಗಳು ಅರಳುವುದಕ್ಕೆ ಪ್ರೇರಣೆ ಏನು ಎಂಬುದನ್ನು ಸೂಕ್ಷ್ಮವಾಗಿ ಹೇಳುವುದು ಸಾಧ್ಯವಿಲ್ಲವೇನೋ. ಯಾಕೆಂದರೆ ಮನೆಯಲ್ಲಿರುವ ಸಾಕುಪ್ರಾಣಿಗಳನ್ನು ಸಾಮಾನ್ಯವಾಗಿ ಮಕ್ಕಳು ತುಂಬಾ ಹಚ್ಚಿಕೊಂಡಿರುತ್ತಾರೆ. ಅವುಗಳಿಗೆ ಹೆಸರಿಟ್ಟು, ತಿಂಡಿ ತೀರ್ಥಗಳನ್ನು ಒದಗಿಸಿ, ಅವುಗಳದ್ದೇ ಧ್ಯಾನದಲ್ಲಿ ಹೆತ್ತವರಿಂದ ಬೈಸಿಕೊಳ್ಳುತ್ತ ಇರುತ್ತಾರೆ. ಆದರೆ ಅವುಗಳಿಗೆ ಶುಶ್ರೂಷೆ ಮಾಡುವ ಆಸಕ್ತಿ ಎಲ್ಲರಲ್ಲಿಯೂ ಇರುವುದಿಲ್ಲ.



ಸಾಕುಪ್ರಾಣಿಗಳ ಸಹವಾಸದಲ್ಲಿಯೂ ಮಕ್ಕಳು ಕಲಿಯಲಿಕ್ಕೆ ಪಾಠಗಳಿರುತ್ತವೆ. ನಾಯಿ–ಬೆಕ್ಕುಗಳ ಸಂಗದಲ್ಲಿ ಕಾಳಜಿ–ಪೋಷಣೆಯ ಭಾವ ಜಾಗೃತಗೊಳ್ಳುತ್ತದೆ.

ಮನೆಯಲ್ಲಿ ಪ್ರಾಣಿಗಳನ್ನು ಸಾಕುವುದು ಒಳ್ಳೆಯ ಹವ್ಯಾಸ. ಈ ಜೀವ ಜಗತ್ತಿನಲ್ಲಿ ಅವುಗಳಿಗೂ ಸ್ಥಾನವಿದೆ ಎಂಬ ಪಾಠವನ್ನು ಮಕ್ಕಳು ಪರೋಕ್ಷವಾಗಿ ಕಲಿಯುತ್ತಾರೆ. ಮನೆಯೊಳಗೆ ಬೆಳೆಯುವ ಬೆಕ್ಕುಗಳಿಗೆ ಮತ್ತು ನಾಯಿಗಳಿಗೆ ಇರುವ ಸ್ನೇಹ–ದ್ವೇಷಗಳು ಎಂಥವು, ಮನೆಯಲ್ಲಿಯೇ ಇರುವ ನಾಯಿಗಳೊಂದಿಗೆ ಅವುಗಳ ಸ್ನೇಹ ಹೇಗಿರುತ್ತದೆ, ಈ ಪುಟಾಣಿ ಮರಿಗಳು ಬೆಳೆಯುವುದಕ್ಕೆ ಇರುವ ಅಡೆತಡೆಗಳೇನು, ಅಮ್ಮ ಬೆಕ್ಕು ಮರಿಗಳನ್ನು ಕಾಪಾಡಲು ಅನುಸರಿಸುವ ವಿವಿಧ ತಂತ್ರಗಳೇನು ಎಂಬೆಲ್ಲ ಪಾಠಗಳನ್ನು ಸುಶಾಂತ್ ತನಗೆ ಅರಿವಿಲ್ಲದಂತೆಯೇ ಕಲಿಯುತ್ತಿದ್ದ.

ಪ್ರಾಣಿಗಳನ್ನು ಕಾಳಜಿ ಮಾಡುವಾಗ, ಮಕ್ಕಳ ಅಂತರಂಗದಲ್ಲಿ ಇರುವ ಪೋಷಣೆಯ ಭಾವವು ಜಾಗೃತವಾಗುತ್ತದೆ. ಜೊತೆಗೆ ಅವರು ಈ ಜೀವ ಜಗತ್ತಿನ ವಿಸ್ಮಯಗಳನ್ನು ಕಣ್ಣಾರೆ ನೋಡಿ, ಅರಿಯಲು ಸಾಧ್ಯವಾಗುತ್ತದೆ. ಪುಟ್ಟ ಮರಿಗಳ ಸಹಜ ಬೆಳವಣಿಗೆಯನ್ನು ನೋಡುವುದಕ್ಕೆ, ಸಂತೋಷ ಪಡುವುದಕ್ಕೊಂದು ಅವಕಾಶವೂ ದೊರೆತಂತಾಗುತ್ತದೆ.

ಚೆಂಗ ಚೆಂಗನೇ ಹಾರುತ್ತ ಮನೆಯ ತುಂಬ ಓಡಾಡುತ್ತಿದ್ದ ಬೆಕ್ಕಿನ ಮರಿಗಳಿಗೆಂದು, ಸುಶಾಂತ್ ಮೊನ್ನೆ ಜಾತ್ರೆಯಲ್ಲಿ ಚಿಕ್ಕ ಚಿಕ್ಕ ಕಾರುಗಳನ್ನು ಖರೀದಿಸಿ ತಂದಿದ್ದ. ಎರಡೂ ಮರಿಗಳು ಓಡುವ ಆ ಕಾರುಗಳನ್ನು ಬೆನ್ನಟ್ಟುತ್ತಿದ್ದರೆ, ಮನೆಯಲ್ಲಿ ಎಲ್ಲರಿಗೂ ನೋಡುವುಕ್ಕೆ ಹಬ್ಬವೆನಿಸುತ್ತಿತ್ತು.

ಪ್ರತಿಕ್ರಿಯಿಸಿ: feedback@sudha.co.in